# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 234 |
| ಮಾನ್ಯ ಸದಸ್ಯರ ಹೆಸರು | ಶ್ರೀ ಎನ್.ಎಸ್. ಭೋಸ್‌ರಾಜ |
| ಉತ್ತರಿಸುವ ಸಚಿವರು | ಉನ್ನತ ಶಿಕ್ಷಣ ಸಚಿವರು |
| ಉತ್ತರಿಸಬೇಕಾದ ದಿನಾಂಕ | 16-07-2018 |

| | ಪ್ರಶ್ನೆ | ಉತ್ತರ |
|---|---|---|
| (ಅ) | 2019-20ನೇ ಶೈಕ್ಷಣಿಕ ಸಾಲಿನಲ್ಲಿ ರಾಯಚೂರು-ಯಾದಗಿರಿ ನಡುವೆ ವಿಶ್ವವಿದ್ಯಾಲಯ ಪ್ರಾರಂಭಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು; | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ಕ್ಕೆ ತಿದ್ದುಪಡಿ ತರಲು ಪ್ರಸ್ತುತ ಕ್ರಮ ಕೈಗೊಳ್ಳಲಾಗುತ್ತಿದ್ದು, ತಿದ್ದುಪಡಿ ಅಧಿನಿಯಮ ಉಭಯ ಸದನಗಳಲ್ಲಿ ಅಂಗೀಕಾರಗೊಂಡು ಗೌರವಾನ್ವಿತ ರಾಜ್ಯಪಾಲರಿಂದ ಅನುಮೋದನೆಯಾದ ನಂತರ ರಾಯಚೂರು ವಿಶ್ವವಿದ್ಯಾಲಯವನ್ನು ಪ್ರಾರಂಭಿಸಲಾಗುವುದು. |
| (ಆ) | 2019-20ನೇ ಶೈಕ್ಷಣಿಕ ಸಾಲಿನಲ್ಲಿ ಮಾನ್ವಿ ತಾಲ್ಲೂಕಿನ ಕವಿತಾಳ ಪಟ್ಟಣದಲ್ಲಿ ವಸತಿಯುಕ್ತ ಪ್ರಥಮ ದರ್ಜೆ ಕಾಲೇಜು ಪ್ರಾರಂಭಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು; | ಮಾನ್ವಿ ತಾಲ್ಲೂಕಿನ ಕವಿತಾಳ ಪಟ್ಟಣದಲ್ಲಿ ವಸತಿಯುಕ್ತ ಪ್ರಥಮ ದರ್ಜೆ ಕಾಲೇಜನ್ನು ಸರ್ಕಾರದ ಆದೇಶ ಸಂಖ್ಯೆ:ಇಡಿ/56/ಹೆಚ್‌ಪಿಸಿ/2017(ಭಾ-1), ದಿ:15.07.2017 ರಲ್ಲಿ ಮಂಜೂರು ಮಾಡಲಾಗಿದೆ. 2019-20ನೇ ಸಾಲಿನಿಂದ ಕಾಲೇಜನ್ನು ಪ್ರಾರಂಭಿಸಲು ಅಗತ್ಯ ಕ್ರಮ ವಹಿಸಲಾಗಿರುತ್ತದೆ. ವಿದ್ಯಾರ್ಥಿಗಳಿಗೆ ವಸತಿ ಸೌಲಭ್ಯವನ್ನು ಒದಗಿಸುವುದು ಅಗತ್ಯವಾಗಿರುವುದರಿಂದ 75 ಪುರುಷ ವಿದ್ಯಾರ್ಥಿಗಳಿಗೆ ಮತ್ತು 45 ಮಹಿಳಾ ವಿದ್ಯಾರ್ಥಿನಿಯರಿಗೆ ವಸತಿಯುಕ್ತ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕಟ್ಟಡ ಕಾಮಗಾರಿ ಪೂರ್ಣವಾಗುವವರೆಗೆ ಸಮಾಜ ಕಲ್ಯಾಣ ಇಲಾಖಾ ವತಿಯಿಂದ ಕವಿತಾಳ ಗ್ರಾಮದಲ್ಲಿ ನಡೆಯುತ್ತಿರುವ ವಿದ್ಯಾರ್ಥಿನಿಲಯಗಳಲ್ಲಿ ವಸತಿಯುಕ್ತ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಲು ರಾಯಚೂರು ಜಿಲ್ಲೆಯ ಜಿಲ್ಲಾಧಿಕಾರಿಯವರಿಗೆ ತಿಳಿಸಲಾಗಿದೆ. ಮಾನ್ವಿ ತಾಲೂಕಿನ ಕವಿತಾಳ ಗ್ರಾಮದಲ್ಲಿ ಹೆಣ್ಣು ಮಕ್ಕಳ ಮತ್ತು ಗಂಡು ಮಕ್ಕಳ ಹಾಸ್ಟೆಲ್‌ಗಳೊಂದಿಗೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಸತಿಯುಕ್ತ ಸರ್ಕಾರಿ ಪ್ರಥಮ ದರ್ಜೆ ಕಾಲೇಜನ್ನು ರೂ.25.00 ಕೋಟಿ ವೆಚ್ಚದಲ್ಲಿ ಸ್ಥಾಪಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಅದರಂತೆ, ಕಾಲೇಜಿಗೆ 9.00 ಎಕರೆ ಜಮೀನು ಮಂಜೂರಾಗಿದ್ದು, ಕಾಲೇಜು ಮತ್ತು ವಿದ್ಯಾರ್ಥಿನಿಲಯದ ಕಟ್ಟಡಗಳು ಪೂರ್ಣಗೊಂಡ ನಂತರ ಕಾಲೇಜನ್ನು ಪ್ರಾರಂಭಿಸುವ ಬಗ್ಗೆ ಕ್ರಮ ಜರುಗಿಸಲಾಗುತ್ತದೆ. ತಳಪಾಯ ಹಂತದ ಕಾಮಗಾರಿ ಪ್ರಗತಿಯಲ್ಲಿದೆ.<br>2019-20ನೇ ಸಾಲಿನಿಂದ ಪ್ರಾರಂಭಿಸಲಾಗುವ ಮಾದರಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಸತಿಯುಕ್ತ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕವಿತಾಳ, ಮಾನ್ವಿ ತಾಲ್ಲೂಕು ಇಲ್ಲಿಗೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಿರಿವಾರ, ಮಾನ್ವಿ ಇಲ್ಲಿಂದ 01 ಪ್ರಾಧ್ಯಾಪಕರನ್ನು ಪ್ರಭಾರ ಪ್ರಾಂಶುಪಾಲರಾಗಿ ಹಾಗೂ ಸರ್ಕಾರಿ ಮಹಿಳಾ ಕಾಲೇಜು, ರಾಯಚೂರು ಇಲ್ಲಿಂದ 01 ದ್ವಿತೀಯ ದರ್ಜೆ ಸಹಾಯಕರನ್ನು ನಿಯೋಜಿಸಿ ಆದೇಶಿಸಲಾಗಿರುತ್ತದೆ. |

.....2

| | | |
|---|---|---|
| (ಇ) | ಮಾನ್ವಿ ಪಟ್ಟಣದಲ್ಲಿ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ಪ್ರಾರಂಭಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು; | ಮಾನ್ವಿ ಪಟ್ಟಣದಲ್ಲಿ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ಪ್ರಾರಂಭಿಸುವ ಬಗ್ಗೆ ಅಗತ್ಯತೆ ಅನುಸಾರವಾಗಿ ಅಗತ್ಯ ಮಾನದಂಡಗಳನ್ವಯ ಪರಿಶೀಲಿಸಿ ಸ್ಥಳ ಪರಿಶೀಲನಾ ವರದಿಯನ್ನು ಸಲ್ಲಿಸುವಂತೆ ಪ್ರಾದೇಶಿಕ ಜಂಟಿ ನಿರ್ದೇಶಕರು, ಕಲಬುರಗಿ ಇವರಿಗೆ ತಿಳಿಸಲಾಗಿದೆ. |
| (ಈ) | ರಾಯಚೂರು ನಗರದಲ್ಲಿರುವ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸ್ವಂತ ಕಟ್ಟಡ ನಿರ್ಮಾಣ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು? | **ರಾಯಚೂರು ನಗರದಲ್ಲಿ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜನ್ನು** 2014-15ನೇ ಸಾಲಿನಲ್ಲಿ ಪ್ರಾರಂಭಿಸಲಾಗಿದೆ. ಸದರಿ ಕಾಲೇಜು ಕಟ್ಟಡಕ್ಕಾಗಿ ರೂ.100.00 ಲಕ್ಷಗಳನ್ನು ಮಂಜೂರು ಮಾಡಲಾಗಿದ್ದು, ಇದರಲ್ಲಿ ರೂ.80.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಮೊದಲ ಹಂತದ ಕಾಮಗಾರಿಯು ಗಿಲಾವು ಕೆಲಸ (Plastering Work) ನಡೆಯುತ್ತಿರುತ್ತದೆ.<br><br>ಇದಲ್ಲದೇ 2017-18ನೇ ಸಾಲಿನಲ್ಲಿ ರೂ.100.00 ಲಕ್ಷಗಳು ಮಂಜೂರಾಗಿದ್ದು, ಕೆ.ಆರ್.ಐ.ಡಿ.ಎಲ್ ಸಂಸ್ಥೆಗೆ ಕಾಮಗಾರಿ ವಹಿಸಲಾಗಿರುತ್ತದೆ. ಸದರಿ ಕಾಮಗಾರಿಯ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ. |

**ಸಂಖ್ಯೆ: ಇಡಿ 209 ಯುಜಿವಿ 2019**

**(ಜಿ.ಟಿ. ದೇವೇಗೌಡ)**
**ಉನ್ನತ ಶಿಕ್ಷಣ ಸಚಿವರು.**

| ಕ್ರ.ಸಂ. | ತಾಲೂಕು | ಕೆರೆ ಹೆಸರು | ವರ್ಷ | ಲೆಕ್ಕಶೀರ್ಷಿಕೆ | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) | ವೆಚ್ಚ (ರೂ.ಲಕ್ಷಗಳಲ್ಲಿ) | ಕಾಮಗಾರಿ ಹಂತ | | ಷರಾ |
|---|---|---|---|---|---|---|---|---|---|
| | | | | | | | ಪೂರ್ಣಗೊಂಡಿದೆ | ಪ್ರಗತಿಯಲ್ಲಿದೆ | |
| 1 | 2 | 3 | 4 | 5 | 6 | 7 | 8 | 9 | 10 |
| 45 | ಬ.ಬಾಗೇವಾಡಿ | ಹೂವಿನಹಿಪ್ಪರಗಿ ಕೆರೆ ಹೂಳೆತ್ತುವ ಕಾಮಗಾರಿ. | 2017-18 | ಕೆರೆ ಸಂಜೀವಿನಿ | 4.00 | | ಪೂರ್ಣಗೊಂಡಿದೆ | | |
| 46 | ಇಂಡಿ | ಗೋಡಿಹಾಳ ಕೆರೆ ಹೂಳೆತ್ತುವ ಕಾಮಗಾರಿ. | 2017-18 | ಕೆರೆ ಸಂಜೀವಿನಿ | 4.00 | 11.64 | ಪೂರ್ಣಗೊಂಡಿದೆ | | |
| 47 | ಇಂಡಿ | ಜೀಗಜೀವಣಗಿ(ಸೈಟ-1) ಕೆರೆ ಹೂಳೆತ್ತುವ ಕಾಮಗಾರಿ. | 2017-18 | ಕೆರೆ ಸಂಜೀವಿನಿ | 4.00 | | ಪೂರ್ಣಗೊಂಡಿದೆ | | |
| 48 | ಇಂಡಿ | ಜೀಗಜೀವಣಗಿ(ಸೈಟ-2) ಕೆರೆ ಹೂಳೆತ್ತುವ ಕಾಮಗಾರಿ. | 2017-18 | ಕೆರೆ ಸಂಜೀವಿನಿ | 4.00 | | ಪೂರ್ಣಗೊಂಡಿದೆ | | |
| 49 | ವಿಜಯಪುರ | ವಿಜಯಪುರ ಜಿಲ್ಲೆಯ ವಿಜಯಪುರ ತಾಲೂಕಿನ ಆಹೇರಿ ಮತ್ತು ಅಂಕಲಗಿ ಸಣ್ಣ ನೀರಾವರಿ ಕೆರೆ ಸುಧಾರಣೆ ಕಾಮಗಾರಿ. | 2018-19 | ಪ್ರಧಾನ ಕಾಮಗಾರಿಗಳು | 100.00 | 0.00 | | | ಟೆಂಡರ್ ಪ್ರಕ್ರಿಯೆಯಲ್ಲಿದೆ. |
| 50 | ವಿಜಯಪುರ | ವಿಜಯಪುರ ತಾಲೂಕಿನ ಹುಣಶ್ಯಾಳ ಹೊಸ ಕೆರೆ ವೇಸ್ಟವೇರ್ ನಿರ್ಮಾಣ ಹಾಗೂ ಪಿಚಿಂಗ್ ಸುಧಾರಣೆ ಕಾಮಗಾರಿ. | 2018-19 | ಪ್ರಧಾನ ಕಾಮಗಾರಿಗಳು | 20.00 | 0.00 | | | ಟೆಂಡರ್ ಪ್ರಕ್ರಿಯೆಯಲ್ಲಿದೆ. |
| 51 | ಸಿಂದಗಿ | ವಿಜಯಪುರ ಜಿಲ್ಲೆಯ ಸಿಂದಗಿ ತಾಲೂಕಿನ ಸಿಂದಗಿ ಕೆರೆ ಸುಧಾರಣೆ ಕಾಮಗಾರಿ. | 2018-19 | ಪ್ರಧಾನ ಕಾಮಗಾರಿಗಳು | 100.00 | 0.00 | | | ಟೆಂಡರ್ ಪ್ರಕ್ರಿಯೆಯಲ್ಲಿದೆ. |
| 52 | ಸಿಂದಗಿ | ವಿಜಯಪುರ ಜಿಲ್ಲೆಯ ಸಿಂದಗಿ ತಾಲೂಕಿನ ಆಲಮೇಲ ಕೆರೆ ಸುಧಾರಣೆ ಕಾಮಗಾರಿ. | 2018-19 | ಪ್ರಧಾನ ಕಾಮಗಾರಿಗಳು | 50.00 | 0.00 | | | ಟೆಂಡರ್ ಪ್ರಕ್ರಿಯೆಯಲ್ಲಿದೆ. |
| 53 | ಸಿಂದಗಿ | ವಿಜಯಪುರ ಜಿಲ್ಲೆಯ ಸಿಂದಗಿ ತಾಲೂಕಿನ ಗೋಲಗೇರಿ ಕೆರೆ ಸುಧಾರಣೆ ಕಾಮಗಾರಿ. | 2018-19 | ಪ್ರಧಾನ ಕಾಮಗಾರಿಗಳು | 50.00 | 0.00 | | | ಟೆಂಡರ್ ಪ್ರಕ್ರಿಯೆಯಲ್ಲಿದೆ. |
| 54 | ಸಿಂದಗಿ | ವಿಜಯಪುರ ಜಿಲ್ಲೆಯ ಸಿಂದಗಿ ತಾಲೂಕಿನ ಚಿಕ್ಕನಗುತ್ತಿ ಕೆರೆ ಸುಧಾರಣೆ ಕಾಮಗಾರಿ. | 2018-19 | ಪ್ರಧಾನ ಕಾಮಗಾರಿಗಳು | 25.00 | 0.00 | | | ಟೆಂಡರ್ ಪ್ರಕ್ರಿಯೆಯಲ್ಲಿದೆ. |
| 55 | ಬ.ಬಾಗೇವಾಡಿ | ಬ.ಬಾಗೇವಾಡಿ ತಾಲೂಕಿನ ಅಕಳವಾಡಿ-ಬಿಕಳವಾಡಿ ಮತ್ತು ಮೂಕರ್ತಿಹಾಳ ಸಣ್ಣ ನೀರಾವರಿ ಕೆರೆಗಳ ಹೂಳು ತೆಗೆಯುವುದು ಹಾಗೂ ಸುಧಾರಣೆ ಮಾಡುವುದು. | 2018-19 | ಪ್ರಧಾನ ಕಾಮಗಾರಿಗಳು | 200.00 | 0.00 | | | ಅಂದಾಜು ಪತ್ರಿಕೆ ತಯಾರಿಸಲಾಗುತ್ತಿದೆ. |
| 56 | ಬ.ಬಾಗೇವಾಡಿ | ಬ.ಬಾಗೇವಾಡಿ ತಾಲೂಕಿನ ಕಿರಿಶ್ಯಾಳ ಮತ್ತು ಮನಗೂಳಿ ಸಣ್ಣ ನೀರಾವರಿ ಕೆರೆಗಳ ಹೂಳು ತೆಗೆಯುವುದು ಹಾಗೂ ಸುಧಾರಣೆ ಮಾಡುವುದು. | 2018-19 | ಪ್ರಧಾನ ಕಾಮಗಾರಿಗಳು | 200.00 | 0.00 | | | ಅಂದಾಜು ಪತ್ರಿಕೆ ತಯಾರಿಸಲಾಗುತ್ತಿದೆ. |
| | | | | ಒಟ್ಟು | **3095.45** | **1261.32** | | | |